# International Forest Day
## 21st March 2019
## “ಅಂತರ ರಾಷ್ಟ್ರೀಯ ಅರಣ್ಯ ದಿನಾಚರಣೆ”


















## "ಅಂತರ ರಾಷ್ಟ್ರೀಯ ಅರಣ್ಯ ದಿನಾಚರಣೆ"

ಹವಾಮಾನ ಅಸಮತೋಲನಕ್ಕೆ ಪ್ರಮುಖ ಕಾರಣ ಅರಣ್ಯ ನಾಶ ಎಂದು ಭೂಗೋಳಶಾಸ್ತ್ರದ ಸಹಾಯಕ ಪ್ರಾಧ್ಯಾಪಕ ವಿ ಹರೀಶ್ ಬಾಬು ಅವರು ಅಭಿಪ್ರಾಯ ಪಟ್ಟರು. ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನ ನೇಚರ್ ಕ್ಲಬ್‌ನ ವತಿಯಿಂದ "ಅಂತರ ರಾಷ್ಟ್ರೀಯ ಅರಣ್ಯ ದಿನಾಚರಣೆ" ಪ್ರಯುಕ್ತ ಹಮ್ಮಿಕೊಂಡಿದ್ದ ವಿಶೇಷ ಉಪನ್ಯಾಸದಲ್ಲಿ ಮಾತನಾಡಿದ ಅವರು ಆಧುನಿಕತೆಯ ಹೆಸರಿನಲ್ಲಿ ಇಂದಿನ ಜನತೆ ಕಾಡುಗಳ ನಾಶ ಮಾಡುತ್ತಿರುವುದು ಆಘಾತಕಾರಿ ಸಂಗತಿ. ಇಂತಹ ಸಂಗತಿಗಳು ಮರುಕಳಿಸದಂತೆ ಎಚ್ಚರ ವಹಿಸಬೇಕಾದ ಮಹತ್ತರ ಜವಾಬ್ದಾರಿ ಯುವ ಜನಾಂಗದ ಮೇಲಿದೆ ಎಂದರು.

ಒಂದು ದೇಶದಲ್ಲಿ ಕಾಲಕಾಲಕ್ಕೆ ಮಳೆ ಬೆಳೆ ಸರಿಯಾಗಿ ಬರಬೇಕಾದರೆ ಶೇ.35% ಅರಣ್ಯ ಸಂಪತ್ತಿರಬೇಕು. ಆದರೆ, ಮನುಷ್ಯ ತನ್ನ ಮೋಜು ಮಸ್ತಿ ಉದ್ದೇಶಕ್ಕೆ ಸಂಪದ್ಭರಿತವಾದ ಅರಣ್ಯ ಸಂಪತ್ತು ಹಾಗೂ ವನ್ಯಜೀವಿ ಸಂಪತ್ತು ಅಳಿವಿನಂಚಿಗೆ ಕೊಂಡೊಯ್ದಿರುವುದು ಮಾನವನ ಭವಿಷ್ಯದ ಮೇಲೆ ಋಣಾತ್ಮಕ ಪರಿಣಾಮವನ್ನುಂಟು ಮಾಡಬಹುದು. ಹಿಂದೆ ಸ್ವಚ್ಛವಾದ, ಕುಡಿಯಲು ಯೋಗ್ಯವಾದ ನೀರು ಕಾಡುಮೇಡುಗಳಲ್ಲಿ ಹರಿದು ಮಾನವನಿಗೆ ದೊರಕುತಿತ್ತು. ಇಂದು ಅಂತಹ ವಾತಾವರಣವಿಲ್ಲ. ಆದ್ದರಿಂದ ಭಾರತ ಸಂವಿಧಾನದ ಮೂಲಭೂತ ಕರ್ತವ್ಯಗಳಲ್ಲೊಂದಾದ ನದಿ, ಸರೋವರ, ಅರಣ್ಯ, ವನ್ಯಜೀವಿ ಸಂಪತ್ತನ್ನು ರಕ್ಷಿಸಲು ಪ್ರತಿಯೊಬ್ಬರೂ ಸಂಕಲ್ಪ ಮಾಡಬೇಕೆಂದು ಕರೆಕೊಟ್ಟರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಸ್.ಮರೀಗೌಡರವರು ವಿಶ್ವಸಂಸ್ಥೆಯು 2012ರ ನಿರ್ಣಯವೊಂದನ್ನು ಸಾಮಾನ್ಯ ಸಭೆಯಲ್ಲಿ ಅಂಗೀಕರಿಸಿ ಅದರಂತೆ 2013 ಮಾರ್ಚ್ 21ರಂದು ಮೊದಲ ಅಂತರರಾಷ್ಟ್ರೀಯ ಅರಣ್ಯ ದಿನವನ್ನಾಗಿ ಆಚರಿಸಿ, ಪ್ರತಿವರ್ಷ ಅದೇ ದಿನದಂದು ಆಚರಿಸಿಕೊಂಡು ಬರಲಾಗುತ್ತಿದೆ ಎಂದರು. ನೇಚರ್ ಕ್ಲಬ್ ಘಟಕದ ಸಂಯೋಜನಾಧಿಕಾರಿ ಶ್ರೀ.ಎನ್.ಮೋಹನ್ ಕುಮಾರ್ ವೇದಿಕೆಯಲ್ಲಿ ಹಾಜರಿದ್ದು ಸರ್ವರನ್ನು ಸ್ವಾಗತಿಸಿದರು. ನೇಚರ್ ಕ್ಲಬ್‌ನ ಸುಮಾರು 80 ಜನ ಸ್ವಯಂ ಸೇವಕರು, ಕಾಲೇಜಿನ ಅಧ್ಯಾಪಕ ಹಾಗೂ ಅಧ್ಯಾಪಕೇತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.